**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ ಸಿ ಸಂಃ 636/2019**

| | | |
|---|---|---|
| ಸಾಕ್ಷಿಯ ಹೆಸರುಃ | ಮಂಜುನಾಥ ಕೆ.ಎಸ್ | ಫ್ರಾಸಾಃಃ 2 |
| ತಂದೆ ಹೆಸರುಃ | ಸಣ್ಣಪ್ಪನಾಯಕ | ಚಾಸಾಃಃ 4 |
| ವಯಸ್ಸುಃ | 46 ವರ್ಷ | ಪ್ರಮಾಣೀಕರಿಸಿದ ದಿಃ 24/06/2024 |
| ಉದ್ಯೋಗಃ | ಹೆಚ್.ಸಿ-79, ಪಿರಿಯಾಪಟ್ಟಣ ಪೊಲೀಸ್ ಠಾಣೆ | |
| ವಾಸ ಸ್ಥಳಃ | ಪಿರಿಯಾಪಟ್ಟಣ. | |

**ಮುಖ್ಯ ವಿಚಾರಣೆಃ** ಮಾನ್ಯ **ಸಸಅ ರಿಂದಃ**

ನಾನು 2012 ರಿಂದ 2018 ರವರೆಗೆ ಬೆಟ್ಟದಪುರ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿನಾಂಕಃ02/10/2016 ರಂದು ಫ್ರಾಸಾ-1 ರವರು ನನ್ನನ್ನು ರಾತ್ರಿ ಕರ್ತವ್ಯಕ್ಕೆ ನೇಮಕಮಾಡಿದ್ದು, ರಾತ್ರಿ 11.00 ಗಂಟೆ ಸಮಯಕ್ಕೆ ಮರದೂರು, ಅತ್ತಿಗೋಡು, ಅಲಗನಹಳ್ಳಿ ಕಡೆಗೆ ಗಸ್ತು ಮಾಡುತ್ತಿರುವಾಗ ಫ್ರಾಸಾ-1 ರವರಿಗೆ ದಿಃ 03/10/2016 ರಂದು ಬೆಳಗಿನ ಜಾವ 2.20 ಗಂಟೆ ಸಮಯಕ್ಕೆ ಬಾತ್ಮಿದಾರರಿಂದ ಮಾಹಿತಿ ಬಂದ ಮೇರೆಗೆ ನನ್ನೊಂದಿಗೆ ಚಾಸಾ-5 ಮತ್ತು 6 ರವರು ಗಸ್ತಿನಲ್ಲಿದ್ದು, ನಾವು ಪಂಚರೊಂದಿಗೆ ಬೆಳಗಿನ ಜಾವ 2.40 ಗಂಟೆಗೆ ಗೊರಹಳ್ಳಿ- ಚಪ್ಪರದಹಳ್ಳಿ ಮುಖ್ಯ ರಸ್ತೆಯ ಕಾಡುಬಸವೇಶ್ವರ ದೇವಸ್ಥಾನದ ಹತ್ತಿರ ಇದ್ದಾಗ ಒಬ್ಬ ಆಸಾಮಿಯು ತನ್ನ ಮೋಟಾರ್ ಸೈಕಲ್ ನಲ್ಲಿ ಎರಡು ರಟ್ಟಿನ ಬಾಕ್ಸ್ ನಲ್ಲಿ ಅಕ್ರಮವಾಗಿ ಮದ್ಯವನ್ನು ಸಾಗಾಣಿಕೆ ಮಾಡುತ್ತಿರುವುದಾಗಿ ಬಂದ ಮಾಹಿತಿ ಮೇರೆಗೆ, ನಾವು ಟಾರ್ಚ್ ಸಹಾಯದಿಂದ ಸದರಿ ಆಸಾಮಿಯ ಬೈಕನ್ನು ಅಡ್ಡಗಟ್ಟಿ ಹಿಡಿದು, ಹೆಸರು ವಿಳಾಸ ಕೇಳಲಾಗಿ, ಆತನ ಹೆಸರು

ವಿಕಾಸ್ ಅಲಿಯಾಸ್ ಸಚಿನ್ ಬಿನ್ ನಾಗೇಗೌಡ, ಕೇರಳಾಪುರ ಗ್ರಾಮ, ಅರಕಲಗೂಡು ತಾಲ್ಲೂಕು ಎಂದು ತಿಳಿಸಿರುತ್ತಾರೆ. ಸದರಿ ಮಧ್ಯದ ತುಂಬಿದ ಬಾಕ್ಸನ್ನು ಪರಿಶೀಲಿಸಲಾಗಿ, ಅದರಲ್ಲಿ 90 ಎಂ.ಎಲ್.ನ 96 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಹಾಗೂ ಇನ್ನೊಂದು ರಟ್ಟಿನ ಬಾಕ್ಸ್ ನಲ್ಲಿ 180 ಎಂ.ಎಲ್.ನ 8 ಪಿಎಂ ರೇರಾ ವಿಸ್ಕಿಯ 14 ಟೆಟ್ರಾ ಪ್ಯಾಕೇಟುಗಳು ಇದ್ದುದ್ದು ಕಂಡುಬಂದಿರುತ್ತದೆ. ಅವುಗಳನ್ನು ಅಮಾನತ್ತು ಪಡಿಸಿಕೊಂಡು, ಅದರ ಪೈಕಿ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಎರಡು ಟೆಟ್ರಾ ಪ್ಯಾಕೇಟ್‌ಗಳನ್ನು ಮತ್ತು ಒಂದು 8 ಪಿ.ಎಂ ರೇರಾ ವಿಸ್ಕಿಯ ಟೆಟ್ರಾ ಪ್ಯಾಕೇಟನ್ನು ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು, ಒಂದು ಬಿಳಿ ಬಟ್ಟೆಯಲ್ಲಿ ಸುತ್ತಿ **ಪಿ** ಎಂಬ ಅಕ್ಷರದಿಂದ ಸೀಲು ಮಾಡಿರುತ್ತೇವೆ. ನಂತರ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರ್ ಕ್ರಮವನ್ನು ಬೆಳಗಿನ ಜಾವ 2.45 ರಿಂದ 4.00 ಗಂಟೆಯವರೆಗೆ ಜರುಗಿಸಿದೆವು. ಆತನಿಂದ ಒಂದು ಟಿವಿಎಸ್ ಸ್ಟಾರ್ ಸಿಟಿ ಮೋಟರ್ ಸೈಕಲ್ ಮತ್ತು ರೂ.1,300/- ನಗದು ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ನಂತರ ಠಾಣೆಗೆ ಬಂದು ಪ್ರಾಸಾ-1 ರವರು ಠಾಣಾಧಿಕಾರಿಗೆ ವರದಿಯನ್ನು ನೀಡಿರುತ್ತಾರೆ. ನಾನು ಈ ಸಂಬಂಧ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ.1 ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಬಿ)** ಎಂದು ಗುರುತಿಸಲಾಯಿತು.

3. ಆ ದಿನ ವಶಪಡಿಸಿಕೊಂಡ ಮಾಲುಗಳು ಈ ದಿನ ನ್ಯಾಯಾಲಯದ ಮುಂದಿರುತ್ತವೆ. ಅವುಗಳನ್ನು **ಮು.ಮಾ.1** ರಿಂದ **3** ಎಂದು ಗುರುತಿಸಲಾಯಿತು. ರೂ.100/- ಮುಖ ಬೆಲೆಯ 13 ನೋಟುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು **ಮುಮಾ.4** ಎಂದು ಗುರುತಿಸಲಾಯಿತು. ಬೈಕ್ ಪೋಟೋ ಇಲ್ಲದ ಕಾರಣ ನಿಶಾನೆಗೊಳಿಸಲಿಲ್ಲ. ಆರೋಪಿತ ಗೈರುಹಾಜರು, ಆರೋಪಿತನ ಗುರುತಿನ ಬಗ್ಗೆ ಆರೋಪಿತರ ಪರ ವಕೀಲರು ತಕರಾರು ಮಾಡಿರುವುದಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ.ಎಸ್. ವಕೀಲರಿಂದಃ**

4. ಆ ದಿನ ಒಂದೇ ಬೀಟ್ ಇದ್ದದ್ದು. ಎಸ್.ಹೆಚ್.ಒ.ರವರೇ ಬೀಟ್ ಬಗ್ಗೆ ನಮೂದಿಸಿರುತ್ತಾರೆ. ನಾವು ಮೊದಲಿಗೆ ಮರದೂರು, ಅತ್ತಿಗೋಡು, ಅಲಗನಹಳ್ಳಿ ನಂತರ ಗೊರಹಳ್ಳಿಗೆ ಗಸ್ತಿಗೆ ಹೋದೆವು. ಪ್ರತಿ ಊರಿನಲ್ಲೂ ಬೀಟ್‌ಗೆ ಹೋದಾಗ ಅಲ್ಲಿ ಪುಸ್ತಕದಲ್ಲಿ ನಮೂದಿಸುತ್ತೇವೆ. ಆ ಪುಸ್ತಕದಲ್ಲಿ ಸಮಯವನ್ನು ನಮೂದಿಸಿರುತ್ತೇವೆ. ಆ ದಿನ ಬೆಳಗಿನ ಜಾವ 2.20 ಕ್ಕೆ ಮಾಹಿತಿ ಬಂದಿತ್ತು. ಆ ದಿನ ನಮ್ಮೊಂದಿಗೆ ಪ್ರಾಸಾ–1 ರವರು ಗಸ್ತಿನಲ್ಲಿದ್ದರು ಹಾಗಾಗಿ ನಾನು ಠಾಣೆಗಾಗಲೀ, ಮೇಲಾಧಿಕಾರಿಗಳಿಗಾಗಲೀ ತಿಳಿಸಲಿಲ್ಲ. ಆರೋಪಿತ ಚಪ್ಪರದಹಳ್ಳಿ ಕಡೆಯಿಂದ ಗೊರಹಳ್ಳಿ ಕಡೆಗೆ ಬೆಳಗಿನ ಜಾವ 2.40 ಗಂಟೆಗೆ ಬರುತ್ತಿದ್ದರು. ನಾವು ಚಪ್ಪರದಹಳ್ಳಿ–ಗೊರಹಳ್ಳಿ ಮುಖ್ಯ ರಸ್ತೆಯ ಕಾಡುಬಸವೇಶ್ವರ ದೇವಸ್ಥಾನದ ಹತ್ತಿರ ಇದ್ದೆವು. ಸ್ಥಳದ ಚಕ್ಕುಬಂದಿ ಪೂರ್ವಕ್ಕೆ ಗೊರಹಳ್ಳಿ ರಸ್ತೆ, ಪಶ್ಚಿಮಕ್ಕೆ ಚಪ್ಪರದಹಳ್ಳಿ ರಸ್ತೆ, ಉತ್ತರಕ್ಕೆ ಕಾಳೇಗೌಡರ ಜಮೀನು, ದಕ್ಷಿಣಕ್ಕೆ ಕಾಡುಬಸವೇಶ್ವರಸ್ವಾಮಿ ದೇವಸ್ಥಾನ. ಅಲ್ಲಿ ಸಾರ್ವಜನಿಕರು ಓಡಾಡುತ್ತಿದ್ದರು. ಆರೋಪಿತ ವಾಹನ ಕೆಂಪು ಮತ್ತು ಕಪ್ಪು ಬಣ್ಣದಿಂದ ಕೂಡಿತ್ತು. ಆ ದಿನ ಆರೋಪಿತ ಯಾವ ಬಣ್ಣದ ಬಟ್ಟೆ ಧರಿಸಿದ್ದರು ನೆನಪಿಲ್ಲ. ವಾಹನದ ಹೆಡ್ ಲೈಟಿನ ಮೇಲೆ ಚಲುವರಾಯಸ್ವಾಮಿ ಕೃಪೆ ಎಂದು ಬರೆದಿತ್ತು. ಆ ಸಮಯಕ್ಕೆ ಆರೋಪಿತ ಒಬ್ಬರೇ ಬರುತ್ತಿದ್ದರು. ನಾವು ಬೆಟ್ಟದಪುರದಿಂದಲೇ ಪಂಚರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿದ್ದೆವು. ನಮಗೆ ಮಾಹಿತಿ ಬಂದಾಗ ಗೊರಹಳ್ಳಿಯಲ್ಲಿ ಗಸ್ತಿನಲ್ಲಿದ್ದೆವು. ಗೊರಹಳ್ಳಿಯಲ್ಲಿ ಸ್ಥಳೀಕರು ಆ ಸಮಯಕ್ಕೆ ಇರಲಿಲ್ಲ, ಕಾರಣ ಪಂಚರನ್ನಾಗಿ ಮಾಡಿಲ್ಲ. ಮದ್ಯದ ತಯಾರಿಕಾ ಕಂಪನಿ ಗೊತ್ತಿಲ್ಲ. ಅದರ ಬ್ಯಾಚ್ ನಂಬರ್ ನೆನಪಿಲ್ಲ. ನಗದು ಹಣದ ಸೀರಿಯಲ್ ನಂಬರ್ ಗೊತ್ತಿಲ್ಲ. ಪಂಚರ ಹೆಸರು ಕುಮಾರ್ ಮತ್ತು ಶ್ರೀನಿವಾಸ. ಮಹಜರ್ ಕಾಲಕ್ಕೆ ಕತ್ತಲಿತ್ತು. ಬೀದಿ ದೀಪ ಇರಲಿಲ್ಲ, ನಾವು ನಮ್ಮ ಜೀಪಿನ ಲೈಟ್ ಬೆಳಕಿನಿಂದ ಮಹಜರ್ ಬರೆದಿರುತ್ತೇವೆ. ಮಾದರಿ ತೆಗೆದ ಮದ್ಯವನ್ನು ಸ್ಥಳದಲ್ಲೇ ಹೊಲೆಯಲಾಯಿತು. ಸ್ಥಳದಲ್ಲೇ **ಪಿ** ಎಂಬ ಗುರುತನ್ನು ಮಾಡಲಾಯಿತು. ಮಾದರಿ ಚೀಟಿಯನ್ನು ಸ್ಥಳದಲ್ಲೇ ಕೈಬರಹದಲ್ಲಿ ಬರೆಯಲಾಯಿತು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ

ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲು ಪಂಚರನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಆ ದಿನ ಬಾತ್ಮಿದಾರರಿಂದ ಯಾವುದೇ ಕರೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಅಂಕಿಅಂಶಕ್ಕೋಸ್ಕರ ಈ ಪ್ರಕರಣ ಸೃಷ್ಟಿಸಿದ್ದೇವೆ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ, ಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**